

# ಇದು ಕಥೆಯಲ್ಲ, ಕಟು ವಾಸ್ತವದ ಪ್ರತಿಬಿಂಬ

ಎಲ್ಲ ಕಾಲದ ಆತ್ಮಸಾಕ್ಷಿಯಂತೆ ಬರೆದ ಸಾಹಿತಿಗಳಲ್ಲಿ ಫ್ರೆಂಚ್ ಲೇಖಕ ಆಲ್ಬರ್ಟ್ ಕಮೂ ಕೂಡ ಒಬ್ಬ. ಆತನ 'ಪ್ಲೇಗ್' ಕಾದಂಬರಿ ಇಪ್ಪತ್ತನೇ ಶತಮಾನದ ಮಹಾನ್ ಕೃತಿಗಳಲ್ಲೊಂದು. ಬದುಕಿದ್ದ ಕೇವಲ 47 ವರ್ಷಗಳಲ್ಲಿ ನೊಬೆಲ್ ಪುರಸ್ಕಾರಕ್ಕೆ ಪಾತ್ರವಾದಂತಹ ಸಾಹಿತ್ಯ ಸೃಷ್ಟಿಸಿದ ಕಮೂ, 'ಪ್ಲೇಗ್' ಎಂಬ ರೂಪಕದ ಮೂಲಕ ಆಗಿನ ಕಾಲಘಟ್ಟದ ಜನ ಅನುಭವಿಸಿದ ಉಸಿರು ಕಟ್ಟಿಸುವ ಭಾವಸ್ಥಿತಿಯನ್ನು, ಅಂದಿನ ದಿಕ್ಕೆಟ್ಟ ವಾತಾವರಣವನ್ನು ಮನ ಕಲಕುವಂತೆ ಚಿತ್ರಿಸಿದ್ದಾನೆ. ಯಾವುದೇ ಒಂದು ಕಾಯಿಲೆಯ ತಾರಕ ಪರಿಣಾಮದಲ್ಲಿ, ಮನುಷ್ಯನೊಳಗಿನ ಕಾಯಿಲೆಗಳೂ ಹಾಗೂ ಕೆಲವೊಮ್ಮೆ ಆ ಕಾಯಿಲೆಗಳನ್ನು ಮೀರಿದ ಮಾನವೀಯತೆಯೂ ಪ್ರಕಟಗೊಳ್ಳುವುದನ್ನು ಕಮೂ ಸಾಹಿತಿಯ ಒಳನೋಟದೊಂದಿಗೆ ಮಾತ್ರವಲ್ಲದೆ, ಸಮಾಜವಿಜ್ಞಾನಿಯ ರೂಪದಲ್ಲೂ ದಾಖಲಿಸಿದ್ದಾನೆ. ಇಂದಿನ ಕೋವಿಡ್ ಬಿಕ್ಕಟ್ಟನ್ನು ಆತ ಚಿತ್ರಿಸಿದ್ದರೆ ಹೇಗಿರುತ್ತಿತ್ತು? ಈ ಪ್ರಶ್ನೆಯ ಬೆನ್ನೇರಿ ರೂಪುಗೊಂಡ ಈ ಬರಹ, ಬೆಂಗಳೂರನ್ನು ಕೇಂದ್ರವಾಗಿಟ್ಟುಕೊಂಡು ಕೋವಿಡ್ ಕಾಲಘಟ್ಟವನ್ನು ಚಿತ್ರಿಸಲು ಪ್ರಯತ್ನಿಸಿದೆ. ಕಮೂನ ಕೃತಿಯ ಈ ಹೊತ್ತಿನ ಅಧ್ಯಾಯದಂತಿರುವ, ಕಥನರೂಪದಲ್ಲಿನ ಈ ಟಿಪ್ಪಣಿಗಳು ವಾಸ್ತವವನ್ನು ನಮ್ಮ ಮುಖಕ್ಕೆ ರಾಚಿ ಹಿಡಿದು, ಈ ಅವ್ಯವಸ್ಥೆಯಲ್ಲಿ ನಿನ್ನ ಪಾತ್ರವೇನು ಎಂದು ಸಹೃದಯರ ಆತ್ಮಸಾಕ್ಷಿಯನ್ನು ಪ್ರಶ್ನಿಸುವಂತಿವೆ.

■ ಪ್ರವೀಣ ಕುಲಕರ್ಣಿ

ಗ್ರಂಥ ಋಣ: ಆಲ್ಬರ್ಟ್ ಕಮೂನ 'ಪ್ಲೇಗ್'
(ಕನ್ನಡ ಅನುವಾದ: ಎಚ್‌.ಎಸ್‌. ರಾಘವೇಂದ್ರರಾವ್)

